ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕು ವಕ್ಕುಂದ ಗ್ರಾಮದಲ್ಲಿ ನೇಕಾರರ ಅಭಿವೃದ್ಧಿಗಾಗಿ ವಸತಿಗೃಹ ಹಾಗೂ ವರ್ಕ್‌ಶೆಡ್ ಕಟ್ಟುವ ಸಲುವಾಗಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಆ) ಮಲಪ್ರಭಾ ಯೋಜನೆಯಲ್ಲಿ ಮುಳುಗಡೆಯಾದ ಜನರು ವಕ್ಕುಂದ ಗ್ರಾಮದಲ್ಲಿ ವಲಸೆ ಬಂದು ನೆಲೆಸಿದ್ದು ಆ ಮುಳುಗಡೆ ನೇಕಾರರ ವಸತಿಗಾಗಿ ಸರ್ಕಾರದವರು ಯಾವ ಕ್ರಮವನ್ನು ಕೈಗೊಂಡಿರುವರುಃ-

ಇ) ಅವರುಗಳಿಗೆ ವರ್ಕ್‌ಶೆಡ್ ಕಟ್ಟುವ ಬಗ್ಗೆ ಸರ್ಕಾರದವರು ಯಾವ ಕ್ರಮವನ್ನು ಕೈಗೊಂಡಿರುವರು?

ಈ) ಬೈಲಹೊಂಗಲ ತಾಲ್ಲೂಕಿನಲ್ಲಿ ಹಾಗೂ ವಕ್ಕುಂದ ಗ್ರಾಮದಲ್ಲಿ ನೇಕಾರರಿಗೆ ಇನ್ನೂ ಹೆಚ್ಚಿನ ಕೈಮಗ್ಗಗಳ ಬೇಡಿಕೆ ಇದ್ದರೂ ಸಹ ಆ ನೇಕಾರರಿಗೆ ಕೈಮಗ್ಗಗಳನ್ನು ಇದುವರೆಗೂ ಪೂರೈಸದೇ ಇರಲು ಕಾರಣಗಳೇನು? ಹಾಗೂ ಅದನ್ನು ಪೂರೈಸಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು?

ಶ್ರೀ ನಸೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು)

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕು ವಕ್ಕುಂದ ಗ್ರಾಮದಲ್ಲಿ ೫೦ ನೇಕಾರರನ್ನು ನಿಗಮಕ್ಕೆ ಆಳವಡಿಸಿಕೊಳ್ಳಲಾಗಿದೆ. ಈ ಪೈಕಿ ೧೩ ನೇಕಾರರಿಗೆ ಕಾರ್ಖಾನೆ ಮತ್ತು ವಸತಿ ನಿರ್ಮಾಣಕ್ಕಾಗಿ ಸಹಾಯಧನವನ್ನು ಮಂಜೂರು ಮಾಡಲಾಗಿದೆ. ಈ ನೇಕಾರರು ನಿವೇಶನವನ್ನು ಹೊಂದಿದ್ದರೆ, ಕಾರ್ಖಾನೆಗಾಗಿ ರೂ.೩,೦೦೦ ಮತ್ತು ವಸತಿ ಹಾಗೂ ಕಾರ್ಖಾನೆಗಾಗಿ ರೂ. ೬,೦೦೦-೦೦ ಸಹಾಯಧನವನ್ನು ನೀಡಲಾಗುವುದು.

ಆ) ವಲಸೆ ಬಂದ ನೇಕಾರರಿಗೆ ನಿರ್ದಿಷ್ಟ ಕಾರ್ಯಕ್ರಮವನ್ನು ಸರ್ಕಾರ ರೂಪಿಸಿಲ್ಲ.

ಇ) ಕ್ರಮಸಂಖ್ಯೆ 2 ರಲ್ಲಿನ ಪ್ರಶ್ನೆಗೆ ಉತ್ತರ ನೀಡಿರುವುದರಿಂದ ಉದ್ಭವಿಸುವುದಿಲ್ಲ.

ಈ) ಸರ್ಕಾರವು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲವೆಂದು ಹೇಳುವುದು ಸರಿಯಲ್ಲ. ನೇಕಾರ ಸದಸ್ಯರ ಕೋರಿಕೆಯನ್ನು ಪರಿಗಣಿಸಿ ವಕ್ಕುಂದ ಗ್ರಾಮದಲ್ಲಿ ೫೦ ನೇಕಾರರಿಗೆ ಮಗ್ಗಗಳನ್ನು ಒದಗಿಸಲಾಗಿದೆ ಮತ್ತು ಬೈಲಹೊಂಗಲ ತಾಲ್ಲೂಕಿಗೆ 620 ಮಗ್ಗಗಳನ್ನು ಆಳವಡಿಸಿದೆ. ಇದರಲ್ಲಿ ವಕ್ಕುಂದ ಗ್ರಾಮದ ೫೦ ಮಗ್ಗಗಳೂ ಸೇರಿವೆ. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಮುಖಾಂತರ ನೇಕಾರರನ್ನು ಆಳವಡಿಸಿಕೊಳ್ಳಲು ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿದೆ.

ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ಹೆಚ್ಚಿಗೆ ಸೀಟುಗಳನ್ನು ಕೊಟ್ಟಿರುವ ವಿಚಾರ

2904 - ಶ್ರೀ ಕರಿಯಣ್ಣ (ಹೊಳಿಹೊನ್ನೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇಃ-

ಅ) 1990-91ನೇ ಸಾಲಿನಲ್ಲಿ ಅನೇಕ ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ಹೆಚ್ಚಿನ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಲು ಸರ್ಕಾರ ಅನುಮತಿ ಕೊಟ್ಟಿರುವುದು ನಿಜವೆ?

ಆ) ಕೊಟ್ಟಿದ್ದಲ್ಲಿ, ಆ ಕಾಲೇಜುಗಳು ಅಥವಾ ವಿದ್ಯಾ ಸಂಸ್ಥೆಗಳಾವುವು ಹಾಗೂ ಎಷ್ಟು ಹೆಚ್ಚಿಗೆ ಸೀಟುಗಳನ್ನು ನೀಡಲಾಗಿದೆ (ವಿವರಗಳನ್ನು ನೀಡುವುದು)

ಇ) ಒಂದು ಪಕ್ಷ ಹೆಚ್ಚಿಗೆ ಸೀಟುಗಳನ್ನು ಕೊಟ್ಟಿದ್ದಲ್ಲಿ ಅದರಲ್ಲಿ ಹರಿಜನ - ಗಿರಿಜನ ಮಕ್ಕಳಿಗೆ ಕಡೆಯ ಪಕ್ಷ ಹದಿನೆಂಟರ ಮೀಸಲಾತಿಯ ಸವಲತ್ತಿನ, ಸೀಟುಗಳನ್ನಾದರೂ ಡೊನೇಷನ್ ಇಲ್ಲದೆ ಕೊಡುವಂತೆ ಆದೇಶ ಮಾಡಲಾಗುವುದೇ?

ಈ) ಹರಿಜನ - ಗಿರಿಜನರಿಗೆ ಇದರಲ್ಲಿ ಮೀಸಲಾತಿ ಇಲ್ಲದೆ ಇದ್ದಲ್ಲಿ ಸರ್ಕಾರವೇ ಹರಿಜನ-ಗಿರಿಜನರ ಮಕ್ಕಳಿಗೆ ಮೀಸಲಾತಿಯನ್ನು ಮೋಸ ಮಾಡಿದಂತೆ ಆಗುವುದಿಲ್ಲವೇ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಆರೋಗ್ಯ ಇಲಾಖೆಯ ಭಾರತೀಯ ವೈದ್ಯ ಪದ್ಧತಿ ಬಗ್ಗೆ

2940 - ಶ್ರೀ ಎಸ್. ರುದ್ರಪ್ಪ (ತುರುವೇಕೆರೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಔಷಧಾಲಯಗಳು ಮತ್ತು ಆಸ್ಪತ್ರೆಗಳು ಎಷ್ಟು ಇವೆ-

ಆ) ಅಸ್ತಿತ್ವದಲ್ಲಿರುವ ಈ ಆಸ್ಪತ್ರೆಗಳಿಗೆ ಸಂಬಂಧಿಸಿದ ವಿದ್ಯಾರ್ಹತೆ ಇರುವ ವೈದ್ಯರುಗಳನ್ನು ನೇಮಿಸಲಾಗಿದೆಯೇ? ಹಾಗೂ ಇಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು?

ಇ) ಬೆಂಗಳೂರಿನ ಎಸ್.ಜಿ.ಐ.ಎಂ. ನಲ್ಲಿ ಈ ಪದ್ಧತಿಯ ವಿಭಾಗ ಇರುವುದು ನಿಜವೆ?

ಈ) ಹಾಗಿದ್ದಲ್ಲಿ ಅಲ್ಲಿರುವ ವೈದ್ಯರು ಯಾರು? ಮತ್ತು ಎಷ್ಟು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ?

ಉ) ಈ ವಿಭಾಗವನ್ನು ನೋಡಿಕೊಳ್ಳಲು ಬೆಂಗಳೂರಿನಲ್ಲಿ ಬೇರೆ ಯಾವುದೇ ಅರ್ಹ ವೈದ್ಯರಿಲ್ಲವೆ? (ಹಾಗಿದ್ದಲ್ಲಿ ಅವರುಗಳ ಪದನಾಮ ಮತ್ತು ನಿರ್ವಹಿಸುತ್ತಿರುವ ಕರ್ತವ್ಯಗಳನ್ನು ತಿಳಿಸುವುದು)

ಊ) ಈ ಪದ್ಧತಿಯನ್ನು ರಾಜ್ಯದ ಇತರೆ ವಿಭಾಗಗಳಲ್ಲಿ ಪ್ರಚಾರಗೊಳಿಸಲು ಉದ್ದೇಶಿಸಲಾಗಿದೆಯೇ?

ಋ) ಹಾಗಿದ್ದಲ್ಲಿ ಬೆಂಗಳೂರಿನಲ್ಲಿಯ ಯೋಗ್ಯ ವೈದ್ಯರುಗಳನ್ನು ಬಳ್ಳಾರಿ ಆಸ್ಪತ್ರೆಗೆ ವರ್ಗಾಯಿಸಿ, ನೇಮಿಸುವುದರಲ್ಲಿ ಸರ್ಕಾರಕ್ಕಿರುವ ತೊಂದರೆಯೇನು?

ಋ) ಇದಕ್ಕೆ ಯಾರ ಬೆಂಬಲವಿದೆ? ಇಲ್ಲದಿದ್ದಲ್ಲಿ ಪ್ರಸ್ತುತ ಸಾಲಿನಲ್ಲಿ ವರ್ಗಾವಣೆ ಮಾಡಲಾಗುವುದೇ?

ಎ) ಇವರು ಪ್ರಸ್ತುತ ವರ್ಗಾವಣ ನಿಯಮದ ಪ್ರಕಾರ ಬೆಂಗಳೂರಿನಲ್ಲಿ ಎರಡು ವರ್ಷಗಳಿಗಿಂದ ಹೆಚ್ಚಿಗೆ ಇರುವುದರಿಂದ ಇವರು ವರ್ಗಾವಣೆಗೆ ಅರ್ಹರಲ್ಲವೆ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಪ್ರಕೃತಿ ಚಿಕಿತ್ಸೆ ಔಷಧಾಲಯಗಳು - 5
ಪ್ರಕೃತಿ ಚಿಕಿತ್ಸೆ ಆಸ್ಪತ್ರೆ - 1.